**ದಿನಾಂಕ** 01.08.2026 **ಸಿಸಿ 1152/2023**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು. ಪಿಡಬ್ಲ್ಯೂ–1**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ಗ್ರೀನ್ ಸಿಟಿ ಲೇಔಟ್ ನ ಮಾಲೀಕರು ಯಾರು ಎಂದು ನನಗೆ ಗೊತ್ತಿಲ್ಲ. ಯಾವ ಸರ್ವೆ ನಂಬರಿನಲ್ಲಿ ಬಡಾವಣೆ ಆಗಿದೆ ಮತ್ತು ಅದರ ವಿಸ್ತೀರ್ಣ ನನಗೆ ಗೊತ್ತಿಲ್ಲ. ಸುಮಾರು 10–15 ಸರ್ವೆ ನಂಬರಿನಲ್ಲಿ ಗ್ರೀನ್ ಸಿಟಿ ಬಡಾವಣೆ ಅಗಿದೆ ಎಂದರೆ ನನಗೆ ಗೊತ್ತಿಲ್ಲ. ಅದರ ಒಟ್ಟು ವಿಸ್ತೀರ್ಣ 50 ಎಕರೆ 22 ಗುಂಟೆ ಎಂದರೆ ನನಗೆ ಗೊತ್ತಿಲ್ಲ. ಗ್ರೀನ್ ಸಿಟಿ ಮಾಲೀಕರು ಆರೋಪಿ ಅಲ್ಲ ಎಂದರೆ ಸರಿ. ಯಾವ ಸರ್ವೆ ನಂಬರಿನಲ್ಲಿ ಆರೋಪಿ ನನಗೆ ನಿವೇಶನ ಕೊಡಿಸುತ್ತಾನೆ ಎಂದು ಹೇಳಿದ್ದ ಎಂದರೆ ನನಗೆ ಗೊತ್ತಿಲ್ಲ. ಅಮರಾವತಿಯಲ್ಲಿ ಇರುವ ಸರ್ವೆ ನಂಬರ ನನಗೆ ಗೊತ್ತಿಲ್ಲ. ಅದರ ಮಾಲೀಕರು ಆರೋಪಿ. ನಿವೇಶವನ್ನು ಕೊಡುವುದಾಗಿ ಎಂದು ಹೇಳಿದ್ದಕ್ಕೆ ಯಾವುದೇ ಕರಾರು ಮಾಡಿಕೊಂಡಿಲ್ಲ. ಕರಾರು ಮಾಡಿಸಿಕೊಳ್ಳಲು ಯಾವುದೇ ತೊಂದರೆ ಇರಲಿಲ್ಲ.

ನಾಗಪ್ಪ ತಂದೆ ಲೇಟ್ ಭೀಮಪ್ಪ ಎನ್ನುವವರು ನನಗೆ ಗೊತ್ತು. ಸದರಿಯವರು ಆರೋಪಿತನ ವಿರುದ್ಧ ಒಂದು ಚೆಕ್ ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿ. ಸಾಕ್ಷಿಗೆ ಈಗ ನಾಗಪ್ಪ ರವರು ಆರೋಪಿತನ ವಿರುದ್ಧ ಹೂಡಿದ ಪ್ರಕರಣದ ಪಿರ್ಯಾದನ್ನು ತೋರಿಸಿದ್ದು , ಸಾಕ್ಷಿಯ ಅದನ್ನು ನೋಡಿ ಗುರುತಿಸಿದ್ದರಿಂದ ಅದನ್ನು **ನಿಡಿ 1 ಎಂದು ಮುಖಾಬಿಲೆಯಾಗಿ ಗುರುತಿಸಲಾಯಿತು.**

ಶಿವಾಜಿ ರಾವ್ ತಂದೆ ಪಿರೋಜಿ ರಾವ್, ಅಶೋಕ ಕುಮಾರ ಬಿ ಹೆಚ್ ತಂದೆ ಹನುಮೇಗೌಡ ಎನ್ನುವವರು ನನಗೆ ಗೊತ್ತು. ಸದರಿಯವರು ಆರೋಪಿತನ ವಿರುದ್ಧ ಒಂದು ಚೆಕ್ ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿ. ಸಾಕ್ಷಿಗೆ ಈಗ ಶಿವಾಜಿ ರಾವ್ ಮತ್ತು ಅಶೋಕ ಕುಮಾರ ರವರು ಆರೋಪಿತನ ವಿರುದ್ಧ ಹೂಡಿದ ಪ್ರಕರಣದ ಪಿರ್ಯಾದನ್ನು ತೋರಿಸಿದ್ದು , ಸಾಕ್ಷಿಯ ಅವುಗಳನ್ನು ನೋಡಿ ಗುರುತಿಸಿದ್ದರಿಂದ ಅದನ್ನು **ನಿಡಿ 2 ಮತ್ತು ನಿಡಿ 3 ಎಂದು ಮುಖಾಬಿಲೆಯಾಗಿ ಗುರುತಿಸಲಾಯಿತು.**

ನಾಗಪ್ಪ ಎನ್ನುವವರು ಆರೋಪಿತನ ವಿರುದ್ಧ ಹರಿಹರ ನಗರ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ ಎಂದರೆ ಸರಿ. ಈಗ ಸಾಕ್ಷಿಗೆ ಸದರಿ ದೂರು ಮತ್ತು ಪ್ರವವ ವರದಿಯನ್ನು ತೋರಿಸಿದ್ದು, ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು **ನಿಡಿ 4 ಮತ್ತು ನಿಡಿ 5 ಎಂದು ಮುಖಾಬಿಲೆಯಾಗಿ ಗುರುತಿಸಲಾಯಿತು.** ನಾನು ಆ ಪ್ರಕರಣದಲ್ಲಿ 7 ನೇ ಸಾಕ್ಷ್ಯದಾರ ಎಂದರೆ ಸರಿ. ನಾನು ಪೊಲೀಸರಿಗೆ ಈ ಕುರಿತು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಈಗ ಸಾಕ್ಷಿ ಅಂತಿಮ ವರಿದಿಯ ಮೊದಲನೇ 6 ಪುಟಗಳನ್ನು ತೋರಿಸಿದ್ದು, ಅದನ್ನು ಸಾಕ್ಷಿಯು ನೋಡಿ ಗುರುತಿಸಿದ್ದರಿಂದ ಅದನ್ನು **ನಿಡಿ 6 ಎಂದು ಮುಖಾಬಿಲೆಯಾಗಿ ಗುರುತಿಸಲಾಯಿತು.** ಈಗ ಸಾಕ್ಷಿಗೆ ಸದರಿ ಪ್ರಕರಣದಲ್ಲಿ ನೀಡಿದ ಹೇಳಿಕೆಯನ್ನು ತೋರಿಸಿದ್ದು, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದರಿಂದ ಅದನ್ನು **ನಿಡಿ 7 ಎಂದು ಮುಖಾಬಿಲೆಯಾಗಿ ಗುರುತಿಸಲಾಯಿತು.** ಆ ಹೇಳಿಕೆಯಲ್ಲಿ ವ್ಯವಹಾರದ ಜೊತೆಗೆ ಆರೋಪಿ ನನಗೆ ಒಂದು ರಶೀದಿ ಕೊಟ್ಟಿದ್ದಾರೆ ಎಂದು ಹೇಳಲಾದ ಸಂಗತಿಯನ್ನು ಪೊಲೀಸರಿಗೆ ತಿಳಿಸಿದ್ದು, ರಶೀದಿಯನ್ನು ಪೊಲೀಸರಿಗೆ ನೀಡಿದ್ದೆ ಎಂದರೆ ಸರಿ. ಈಗ ಸಾಕ್ಷಿಗೆ ರಶೀದಿಯನ್ನು ತೋರಿಸಿದ್ದು, ಅದನ್ನು **ನಿಡಿ 8 ಎಂದು ಮುಖಾಬಿಲೆಯಾಗಿ ಗುರುತಿಸಲಾಯಿತು.** ಹೇಳಿಕೆಯನ್ನು ನೀಡಲು, ನಾನು, ಶಿವಾಜಿ ರಾವ್ ಮತ್ತು ಅಶೋಕ ಕುಮಾರ ಮತ್ತು ಇತರರು ಒಟ್ಟಿಗೆ ಠಾಣೆಗೆ ಹೋಗಿದ್ದೆವು ಎಂದರೆ ಸರಿಯಲ್ಲ. ಅಂತಿಮ ವರದಿಯಲ್ಲಿ 5 ನೇ ಸಾಕ್ಷಿದಾರರಾಗಿ ಶಿವಾಜಿ ರಾವ್ ಮತ್ತು 8 ನೇ ಸಾಕ್ಷಿದಾರರಾಗಿ ಅಶೋಕ ಕುಮಾರ ರವರನ್ನು ಸಾಕ್ಷಿದಾರರನ್ನಾಗಿ ಮಾಡಿದ್ದಾರೆ ಎಂದರೆ ಸರಿ. ನಾನು ಪೊಲೀಸರಿಗೆ ಯಾವಾಗ ಹೇಳಿಕೆ ನೀಡಿದ್ದೇನೆ ಎಂದು ನನಗೆ ಈಗ ನೆನಪಿಲ್ಲ. ದೂರಿನ ಅನ್ವಯ ಆರೋಪಿಯನ್ನು ಪೊಲೀಸರು ಬಂಧಿಸಿದ್ದರು ಎಂದರೆ ಸರಿ. ನ್ಯಾಯಾಲಯಕ್ಕೆ ಹಾಜರುಪಡಿಸಿದ

ವಿಚಾರ ನನಗೆ ಗೊತ್ತು ಆದರೆ ದಿನಾಂಕ ಗೊತ್ತಿಲ್ಲ. ದಿನಾಂಕ 11.07.2023 ರಂದು ಆರೋಪಿ ಜಾಮೀನಿನ ಮೇಲೆ ಬಿಡುಗಡೆ ಆಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಪೊಲೀಸರ ಎದುರು ಆರೋಪಿ ನನಗೆ ನಿವೇಶನ ಸಂಖ್ಯೆ 72 ಮತ್ತು 73 ರಲ್ಲಿ ಒಟ್ಟು 1600 ಚದರ ಅಡಿಯ ಒಟ್ಟು ಎರಡು ನಿವೇಶನಗಳನ್ನು ಕೊಡುವುದಾಗಿ ತಿಳಿಸಿದ್ದರು ಎಂದು ಹೇಳಿಕೆ ನೀಡಿದ್ದೇನೆ ಎಂದರೆ ಸರಿ. ನನ್ನ ಹೇಳಿಕೆಯ ಪ್ರಕಾರ ಯಾವ ದಿನಾಂಕದಂದು ಎಷ್ಟು ಹಣ ಆರೋಪಿಗೆ ನೀಡಿದ್ದೇನೆ ಎಂದು ಈಗ ಹೇಳಲು ನೆನಪಿಲ್ಲ. ನಿಡಿ 7 ರ ಪ್ರಕಾರ ದಿನಾಂಕ 18.11.2019 ರಂದು ರೂ. 5.00 ಲಕ್ಷ ದಿನಾಂಕ 04.10.2020 ರಂದು ರೂ. 2.68 ಲಕ್ಷ ಆರೋಪಿಗೆ ಕೊಟ್ಟಿರುವುದಾಗಿ ಇದೆ ಎಂದರೆ ಸರಿ.

ನನ್ನ ಹೇಳಿಕೆಯಲ್ಲಿ ರಘು ಭಾಯಿ ಪಟೇಲ್ ಎನ್ನುವವರ ಹೆಸರು ಉಲ್ಲೇಖಿಸಿದ್ದೇನೆ ಎಂದರೆ ಸರಿ. ಆತ ಗ್ರೀನ್ ಸಿಟಿಯ ಮಾಲೀಕ ಎಂದರೆ ಸರಿ. ಆರೋಪಿಗೆ ಹಣ ಕೊಟ್ಟಿದ್ದೇನೆ ಎನ್ನುವ ಸಂದರ್ಭದಲ್ಲಿ ಗ್ರೀನ್ ಸಿಟಿ ಮಾಲೀಕರು ರಘು ಭಾಯಿ ಪಟೇಲ್ ಎಂದು ನನಗೆ ಗೊತ್ತಿತ್ತು. ರಘು ಭಾಯಿ ಪಟೇಲ್ ರವರಿಂದ ನಾನು ಯಾವುದೇ ಕರಾರು ಮಾಡಿಕೊಂಡಿಲ್ಲ. ನಾನು ಆರೋಪಿಗೆ ಹಣ ಕೊಟ್ಟಿದ್ದೇನೆ ಎಂದು ಹೇಳುವ ಸಂದರ್ಭದಲ್ಲಿ ಗ್ರೀನ್ ಸಿಟಿ ನಿರ್ಮಾಣ ಮತ್ತು ಅಭಿವೃದ್ಧಿ ಹಂತದಲ್ಲಿ ಇತ್ತು ಎಂದರೆ ಸರಿ.

ಸ್ವತ್ತಿನ ಮಾಲೀಕರಿಗೆ ಹಣವನ್ನು ಕೊಟ್ಟು ಬರವಣಿ ಮಾಡಿಸಿಕೊಳ್ಳಬೇಕು ಎನ್ನುವ ವಿಚಾರ ನನಗೆ ಗೊತ್ತು. ಸಾಮಾನ್ಯವಾಗಿ ಮಧ್ಯವರ್ತಿಗೆ ಹಣವನ್ನು ನೀಡಿದ್ದರೆ ಮಾಲೀಕರ ಕಡೆಯಿಂದ ಷರಾ ಬರೆಸಿಕೊಳ್ಳಬೇಕಾಗುತ್ತದೆ ಎಂದರೆ ಸರಿ.

ಎರಡೂ ಸೈಟ್ ಗಳ ಒಟ್ಟು ಮೊತ್ತ ರೂ.16.80 ಲಕ್ಷ ಆಗುತ್ತವೆ ಎಂದರೆ ಸರಿ. ಬಾಕಿ ಹಣಕ್ಕೆ ಸಂಬಂಧಪಟ್ಟಂತೆ ಮಾಲೀಕರಿಂದ ಬರವಣಿಗೆ ಮಾಡಿಕೊಂಡಿಲ್ಲ ಏಕೆಂದರೆ ನಾನು ಆರೋಪಿತನ ಜೊತೆ ವ್ಯವಹಾರ ಮಾಡಿದ್ದೇನೆ. ಈ ಕುರಿತು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಬಾಕಿ ಹಣವಾದ ರೂ. 9.12 ಲಕ್ಷ ಗಳನ್ನು ಯಾವಾಗ ಕೊಡಬೇಕು ಎಂದು ಮಾತುಕತೆ ಆಗಿರಲಿಲ್ಲ. ನನ್ನ ಹೇಳಿಕೆಯಲ್ಲಿ ನನಗೆ ಕೆಲವೊಂದು ನಿವೇಶಗಳನ್ನು ಮಾಲೀಕರು ಕೊಡುವುದಾಗಿ ಆರೋಪಿ ತಿಳಿಸಿದ್ದಾ ಎಂದು ನಾನು ಹೇಳಿದ್ದು, ಅವರುಗಳ ಮಧ್ಯ ಆದ ಕರಾರು ಪತ್ರವನ್ನು ನಾನು ನೋಡಿಲ್ಲ . ಆ ಕರಾರು ಪತ್ರವನ್ನು ತೋರಿಸದೇ ನಾನು ವ್ಯಾವಹರ ಮಾಡುವುದಿಲ್ಲ ಎಂದು ನನಗೆ ಹೇಳಲು ಏನಾದರೂ ತೊಂದರೆ ಇತ್ತೇ ಎಂದರೆ ನಾನು ಕರಾರು ಪತ್ರವನ್ನು ನೋಡಿದ್ದೇನೆ . ಕರಾರು ಇದ್ದಿದ್ದನ್ನು ನೋಡಿದ್ದೇನೆ. ಆದರೆ ಅದನ್ನು ಪೂರ್ತಿಯಾಗಿ ಓದಿಲ್ಲ. ಅದರ ಪ್ರತಿಯನ್ನು ನನಗೆ ತೆಗೆದುಕೊಳ್ಳಲು ತೊಂದರೆ ಇರಲಿಲ್ಲ ಎಂದರೆ ನನಗೆ ಆ ಸಮಯದಲ್ಲಿ ತೋಚಲಿಲ್ಲ ಎಂದು ನುಡಿಯುತ್ತಾರೆ. ಈ ಕುರಿತು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿ ಮನೆ ಕಟ್ಟಿಸಿಕೊಡುವ ಕೆಲಸ ಮಾಡುತ್ತಾರೆ ಎಂದರೆ ಸಾಕ್ಷಿಯು ಬಡಾವಣೆಗಳನ್ನು ಅಭಿವೃದ್ಧಿ ಮಾಡುತ್ತಿದ್ದರು ಮತ್ತು ಮನೆಯನ್ನು ಸಹ ಕಟ್ಟಿಸಿಕೊಡುತ್ತಿದ್ದರು. ಆರೋಪಿತನು ಬಡಾವಣೆಗಳನ್ನು ಅಭಿವೃದ್ಧಿ ಮಾಡುವ ಅಷ್ಟೋಂದು ವ್ಯವಹಾರ ಇಲ್ಲ ಎಂದರೆ ಸರಿಯಲ್ಲ. ನಿವೇಶನಗಳಿಗೆ ಮಾತ್ರ ನಾನು ಹಣ ನೀಡಿದ್ದು, ಆರೋಪಿ ರಶೀದಿ ನೀಡಿದ್ದ. ಆ ರಶೀದಿ ಮೂಲ ಮಾಲೀಕರು ಹೇಳಿದ ಕಾರಣ ಆರೋಪಿ ನನಗೆ ನೀಡಿದ್ದಾನೆ ಎಂದರೆ ನನಗೆ ಗೊತ್ತಿಲ್ಲ. ನಿಡಿ 8 ರ ದಿನಾಂಕ 18.11.2019 ರ ರಶೀದಿಯಲ್ಲಿ ನಿವೇಶನ ಮತ್ತು ಮನೆಯ ಕುರಿತು ಮುಂಗಡ ಹಣ ಎಂದು ಬರೆಯಲಾಗಿದೆ ಎಂದರೆ ಸರಿ. ದಿನಾಂಕ 04.10.2020 ರ ರಶೀದಿಯಲ್ಲಿಯೂ

ಸಹ ನಿವೇಶನ ಮತ್ತು ಮನೆಯ ಕುರಿತು ಮುಂಗಡ ಹಣ ಎಂದು ಬರೆಯಲಾಗಿದೆ ಎಂದರೆ ಸರಿ. ಮನೆ ಕಟ್ಟಿಸಿಕೊಡುತ್ತೇನೆ ಎಂದು ಆರೋಪಿ ನನಗೆ ತಿಳಿಸಿದ್ದ. ನಿಡಿ 8 ರ ಕೈ ಬರವಣಿಗೆಯಲ್ಲಿರುವ ದಾಖಲೆಯಲ್ಲಿ ಕೇವಲ ನಿವೇಶನ ಸಂಖ್ಯೆ72 ಮತ್ತು 73 ಕ್ಕೆ ಸಂಬಂಧಿಸಿದ್ದು, ಒಟ್ಟು ಹಣ 9.12 ಲಕ್ಷ ರೂ. ಎಂದು ತೋರಿಸಲಾಗಿದೆ ಎಂದರೆ ಸರಿ. ಅದೇ ದಾಖಲೆಯಲ್ಲಿ 1600 x 480 ಕ್ಯಾಶ್ = 7,68,000/- ಎಂದು ಪ್ರತ್ಯೇಕವಾಗಿ ಬರೆಯಲಾಗಿದ್ದು, 1600 x 570 ಚೆಕ್ = 9,12,000/- ಎಂದು ಬರೆಯಲಾಗಿದೆ ಎಂದರೆ ಸರಿ. ರೂ, 7.68 ಲಕ್ಷ ಗಳೇ ನಿಪಿ 1 ರ ವ್ಯವಹಾರ ಎಂದರೆ ಸರಿಯಲ್ಲ. ಹಣವನು ಪಾವತಿ ಮಾಡಿ ಒಂದು ವರ್ಷಗಳ ಒಳಗೆ ಮನೆಯನ್ನು ನಿರ್ಮಾಣ ಮಾಡಿಕೊಡುತ್ತೇನೆ ಎಂದು ಆರೋಪಿ ನನಗೆ ತಿಳಿಸಿದ್ದನು. ಮನೆಯನ್ನು ಕಟ್ಟಿಕೊಳ್ಳಬೇಕಾದರೆ ನಿವೇಶನ ಒಬ್ಬ ವ್ಯಕ್ತಿಯ ಹೆಸರಿಗೆ ನೋಂದಣಿ ಆಗಿರಬೇಕು ಎಂದರೆ ಸರಿ.

ಗ್ರೀನ್ ಸಿಟಿಯಲ್ಲಿ ನನ್ನ ಹೆಸರಿಗೆ ಈ ದಿನದವರೆಗೂ ಯಾವುದೇ ನಿವೇಶನ ನೋಂದಣಿಯಾಗಿಲ್ಲ. ನಿವೇಶನ ನೋಂದಣಿಯಾಗದೇ ಇರುವ ಕಾರಣ ಆರೋಪಿ ಮನೆ ಕಟ್ಟಿಕೊಡಲು ಆಗಿಲ್ಲ ಎಂದರೆ ಸಾಕ್ಷಿಯು ಆತನೇ ನಿವೇಶನವನ್ನು ನೋಂದಣಿ ಮಾಡಿಕೊಡಬೇಕು ಎಂದು ನುಡಿಯುತ್ತಾರೆ. ಈ ಕುರಿತು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿ ಬಿಡುಗಡೆಯಾದ ನಂತರ ನಾನು ಆತನನ್ನು ಭೇಟಿಯಾದಗ ಆತ ಏಕೆ ತನ್ನ ಮೇಲೆ ಸುಳ್ಳು ಪಿರ್ಯಾದನ್ನು ಸಲ್ಲಿಸಿದ್ದೀರಿ ಎಂದು ನನಗೆ ಹಾಗೂ ಉಳಿದ ಸಾಕ್ಷಿದಾರರಿಗೆ ಕೇಳಿದ ಎಂದರೆ ಸರಿಯಲ್ಲ. ಆರೋಪಿ ಬಂಧನವಾಗುವ 6 ತಿಂಗಳ ಮೊದಲು ನಿವಶೇನದ ಕುರಿತು ಆತನನ್ನು ನಾನು ಸಂಪರ್ಕಿಸಿದ್ದೆ. ಆತ ಗ್ರೀನ್ ಸಿಟಿಯ ಮಾಲೀಕ ಅಲ್ಲದೇ ಇರುವ ಕಾರಣ ನಾನು ದೂರವಾಣಿ ಮೂಲಕ ಆರೋಪಿಯನ್ನು ಸಂಪರ್ಕಿಸುವ ಪ್ರಮೇಯವೇ ಉದ್ಭವಾಗುವುದಿಲ್ಲ ಎಂದರೆ ಸರಿಯಲ್ಲ. ಆತ ಜೈಲಿನಿಂದ ಬಿಡುಗಡೆ ಆದ ನಂತರ ನನ್ನ ಮತ್ತು ಆರೋಪಿತನ ಮಧ್ಯ ವೈಮನಸ್ಸು ಮತ್ತು ಭಿನ್ನಾಭಿಪ್ರಾಯ ಉಂಟಾಯಿತು ಎಂದರೆ ಸರಿಯಲ್ಲ. ಆರೋಪಿ ನನಗೆ ಮನೆಯನ್ನು ಕಟ್ಟಿಸಿಕೊಟ್ಟಿಲ್ಲ ಎಂಬ ಉದ್ದೇಶದಿಂದ ಆತನ ಮೇಲೆ ವೈಮನಸ್ಸು ಇದೆ ಎಂದರೆ ನನಗೆ ಬೇಜಾರು ಇದೆ. ಮನೆ ಕಟ್ಟಿಸಿಕೊಡುತ್ತೇನೆ ಎನ್ನುವುದರ ಕುರಿತು ನಿಡಿ 8 ನ್ನು ಹೊರತುಪಡಿಸಿ ಬೇರೆ ಯಾವುದೇ ಬರವಣಿಗೆ ಆಗಿಲ್ಲ. ನಿಡಿ 8 ರಲ್ಲಿ ತೋರಿಸಿದ ದಿನಾಂಕಕ್ಕೂ ಮತ್ತು 2022 ನೇ ಇಸವಿಗೂ ಎರಡು ವರ್ಷಗಳ ಅಂತರ ಇದೆ ಎಂದರೆ ಸರಿ. ಹೇಳಿದ ಕೆಲಸವನ್ನು ಒಬ್ಬ ವ್ಯಕ್ತಿ ನಡೆಸಿಕೊಳ್ಳದೇ ಹೋದರೆ ನನ್ನ ಪ್ರಕಾರ ಆತನನ್ನು ಸುಳ್ಳುಗಾರ ಮತ್ತು ಮೋಸಗಾರ ಎಂದು ಹೇಳುತ್ತಾರೆ ಎಂದರೆ ಸರಿ. ಅಂತಹ ವ್ಯಕ್ತಿಯಿಂದ ಸಾಮಾನ್ಯವಾಗಿ ದೂರ ಇರುತ್ತಾರೆ ಎಂದರೆ ಸಾಕ್ಷಿಯು ನಾನು ಆರೋಪಿತನ ಜೊತೆ ಸಂಪರ್ಕದಲ್ಲಿ ಇದ್ದೆ ಎಂದು ನುಡಿಯುತ್ತಾರೆ. ಈ ಕುರಿತು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಮತ್ತು ಆರೋಪಿತನ ಮಧ್ಯ ಏಪ್ರಿಲ್ 2022 ರಲ್ಲಿ ಯಾವುದೇ ಹಣದ ವ್ಯವಹಾರ ಅಗಿಲ್ಲ ಎಂದರೆ ಸರಿಯಲ್ಲ. ಆರೋಪಿ ಕೈಗಡ ಸಾಲವಾಗಿ ರೂ. 7.68 ಲಕ್ಷ ಹಣವನ್ನು ಪಡೆದುಕೊಂಡಿದ್ದ. ಕೈಗಡ ಸಾಲ ಎಂದು ಪಿರ್ಯಾದಿಯಲ್ಲಿ ಬರೆಯಲು ತೊಂದರೆ ಇರಲಿಲ್ಲ ಎಂದರೆ ಸಾಲ ಎಂದು ಬರೆದಿದ್ದೇನೆ ಎಂದು ನುಡಿಯುತ್ತಾರೆ. ಸಾಲವೆಂದರೆ ಬಡ್ಡಿಗಾಗಿ ನೀಡಲಾಗುತ್ತದೆ ಎಂದರೆ ಸರಿ. ನಾನು ಬಡ್ಡಿಗಾಗಿ ಹಣವನ್ನು ನೀಡಿಲ್ಲ. ಸಾಮಾನ್ಯವಾಗಿ ಯಾವುದಾದರೂ ಒಬ್ಬ ವ್ಯಕ್ತಿ ಸಾಲವನ್ನು ಕೇಳಬೇದಾರೆ ರೌಂಡ್ ಫಿಗರ್ ಗಳಲ್ಲಿ ಸಾಲ ಕೇಳುತ್ತಾರೆ ಎಂದರೆ ಸರಿ.

ನಾನು ಸಾಕ್ಷ್ಯದಾರರ ಸಮಕ್ಷಮ ಹಣ ನೀಡಿದ್ದೇನೆ ಎಂದು ಪಿರ್ಯಾದಿಯಲ್ಲಿ ತಿಳಿಸಿದ್ದು, ಯಾವ ಸಾಕ್ಷ್ಯದಾರರು ಎಂದು ಅದರಲ್ಲಿ ಹೇಳಿ ಬರೆಸಲು ತೊಂದರೆ ಇರಲಿಲ್ಲ. ಸಾಮಾನ್ಯವಾಗಿ ದೊಡ್ಡ ಮೊತ್ತದ ಹಣವನ್ನು ನೀಡಿದ್ದರೆ ಹಣ ಪಡೆದ ವ್ಯಕ್ತಿಯಿಂದ ಯಾವುದಾದರೂ ಒಂದು ದಾಖಲೆಯನ್ನು ಪಡೆಯುತ್ತಾರೆ ಎಂದರೆ ಸರಿಯಲ್ಲ. ನಿಪಿ 8 ರಲ್ಲಿ ತೋರಿಸಿದ ಹಣವನ್ನು ಆದಾಯ ತೆರಿಗೆಯಲ್ಲಿ ತೋರಿಸಿದ್ದೇನೆ. ಆ ಬಗ್ಗೆ ದಾಖಲೆಗಳನ್ನು

**ದಿನಾಂಕ 01.08.2026** **ಸಿಸಿ 1152/2023**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ – 1**

ಹಾಜರುಪಡಿಸುತ್ತೇನೆ. ನಾನು ಹಣವನ್ನು ನೀಡಿ ಎರಡು ತಿಂಗಳುಗಳ ಬಳಿಕ ಆರೋಪಿಗೆ ಹಣವನ್ನು ಹಿಂದಿರುಗಿಸಿ ಎಂದು ಹಲವಾರು ಬಾರಿ ಕೇಳಿಕೊಂಡಿದ್ದೇನೆ. ಹಣದ ಬದಲಾಗಿ ನಿವೇಶನವನ್ನು ನೀಡುತ್ತೇನೆ ಎಂದು ದಿನಾಂಕ 10.04.2022 ರಂದು ಆರೋಪಿ ತಿಳಿಸಿದ್ದ. 2019 ರಲ್ಲಿ ಆದ ನಿವೇಶನದ ವ್ಯವಹಾರ ಇನ್ನೂ ಪೂರ್ತಿಗೊಂಡಿಲ್ಲ ಹಾಗಾಗೀ ಹಣವನ್ನು ವಾಪಸ್ ಕೊಡಿ ಎಂದು ನನಗೆ ಕೇಳಲು ಏನಾದರೂ ತೊಂದರೆ ಇತ್ತೇ ಎಂದರೆ ಸಾಕ್ಷಿಯು ನಿವೇಶನಗಳ ವ್ಯವಹಾರ ನಾನು ಮುಗಿಸಿಕೊಡುತ್ತೇನೆ ಎಂದು ಹೇಳಿದ ಕಾರಣ ನಾನು ಅದಕ್ಕೆ ಒಪ್ಪಿದೆ. ಈ ಕುರಿತು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ 8 ರ ವ್ಯವಹಾರದ ಕುರಿತು ಪಿರ್ಯಾದಿಯಲ್ಲಿ ಹೇಳಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ನಿಡಿ 8 ರ ವ್ಯವಹಾರದ ಕುರಿತು ಬೇರೆ ಪಿರ್ಯಾದನ್ನು ಸಲ್ಲಿಸಿದ್ದೇನೆ ಎಂದು ನುಡಿಯುತ್ತಾರೆ. ಈ ಕುರಿತು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕ 10.04.2022 ರಂದು ಆದ ವ್ಯವಹಾರಕ್ಕೆ ಆರೋಪಿ ನನಗೆ ನಿಪಿ 1 ಮತ್ತು 7 ನ್ನು ನೀಡಿದ್ದಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2021 ನೇ ಇಸವಿಯಲ್ಲಿ ನನ್ನ ಹೆಂಡತಿ ಮತ್ತು ನನ್ನ ಮಾವ ವಿಶ್ವನಾಥ ಹಾಗೂ ನನ್ನ ಭಾಗ ಪ್ರವೀಣ ಎನ್ನುವವರು ನನಗೆ ಹಣವನ್ನು ನೀಡಿದ್ದರು ಮತ್ತು ಅದನ್ನು ನಿಪಿ 9 ರಲ್ಲಿ ತೋರಿಸಿದ್ದೇನೆ. ನಿಪಿ 9 ರಲ್ಲಿ ಅದನ್ನು Unsecured Loan ಅಡಿಯಲ್ಲಿ ತೋರಿಸಿದ್ದೇನೆ ಎಂದರೆ ಸರಿ. ಹಾಗೆಂದರೆ ಆ ಹಣವನ್ನು ಅವರಿಗೆ ವಾಪಸ್ ನೀಡಬೇಕು ಎಂದರ್ಥ. ಯಾವುದೇ ಒಂದು ಸಾಲವನ್ನು 3 ವರ್ಷದ ಒಳಗೆ ಹಿಂದಿರುಗಿಸಬೇಕಾಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಅನುಕೂಲವಾಗಲೀ ಎಂದು ನಿಪಿ 9 ನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.

ನಿಡಿ 8 ಮನೆ ನಿರ್ಮಾಣದ ವ್ಯಾಹರ ಆಗುವ ಸಂದರ್ಭದಲ್ಲಿ ನಿಪಿ 1 ಮತ್ತು 7 ನ್ನು ಆರೋಪಿಯಿಂದ ಪಡೆದಿದ್ದೆ ಎಂದರೆ ಸರಿಯಲ್ಲ. ಭದ್ರತೆಗಾಗಿ ಪಡೆದ ಚೆಕ್ ಗಳನ್ನು ದುರುಪಯೋಗ ಪಡಿಸಿಕೊಂಡು ಸುಳ್ಳು ಪಿರ್ಯಾದನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 1 ಮತ್ತು 7 ಕಾನೂನು ಬದ್ಧ ಸಾಲದ ತಿರುವಳಿಗಾಗಿ ನೀಡಿದ ಚೆಕ್ ಗಳು ಅಲ್ಲ ಎಂದರೆ ಸರಿಯಲ್ಲ. ಆರೋಪಿಯೇ ನಿಪಿ 1 ಮತ್ತು 7 ರ ಒಕ್ಕಣೆಗಳನ್ನು ಬೆರದುಕೊಟ್ಟಿದ್ದಾನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು, ಶಿವಜಿರಾವ್, ಅಶೋಕ ಕುಮಾರ, ನಾಗಪ್ಪ ಎನ್ನುವವರು ಶಾಮೀಲಾಗಿ ಸುಳ್ಳು ಪಿರ್ಯಾದನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ಹರಿಹರ